ಡೀನ್/ಪ್ರಾಂಶುಪಾಲರುಗಳು ನೇಮಕಾತಿಯ ನಿಯಮಗಳು

387 (83) ಡಾ: ಹೆಚ್.ಸಿ.ಮಹದೇವಪ್ಪ (ಟಿ. ನರಸೀಪುರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತೀಯ ವೈದ್ಯಕೀಯ ಪರಿಷತ್ Minimum Qualifications for Teachers in Medical Institutions Regulations 1998 ಕ್ಕೆ ದಿನಾಂಕ: 21.07.2009 ರಂದು ತಿದ್ದುಪಡಿ ಮಾಡುವ ಮೂಲಕ Minimum Qualifications for Teachers in Medical Institutions (Amendment) Regulations 2009 ನ್ನು ಜಾರಿಗೊಳಿಸಿದೆ;

ಆ) ಅದರಂತೆ, ವೈದ್ಯಕೀಯ ಕಾಲೇಜು ಹಾಗೂ ಬೋಧಕ ಆಸ್ಪತ್ರೆಗಳಿಗೆ ಡೀನ್/ ಪ್ರಿನ್ಸಿಪಾಲ್, ವೈದ್ಯಕೀಯ ಅಧೀಕ್ಷಕರು, ವಿಭಾಗಗಳ ಮುಖ್ಯಸ್ಥರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ನಿಯಮಗಳನ್ನು ರೂಪಿಸಿದೆಯೇ;

ಇ) ಅದರಂತೆ, ರಾಜ್ಯ ಸರ್ಕಾರವು ಸರ್ಕಾರಿ ವೈದ್ಯಕೀಯ ಕಾಲೇಜು ಹಾಗೂ ಬೋಧಕ ಆಸ್ಪತ್ರೆಗಳಲ್ಲಿನ ಮೇಲ್ಕಂಡ ಹುದ್ದೆಗಳನ್ನು ಸದರಿ ನಿಯಮಾವಳಿಯ ಅನುಸಾರ ಹಾಗೂ ಪ್ರಾಧ್ಯಾಪಕ ವೃಂದದ ಅಂತಿಮ ಸಂಯುಕ್ತ ಜೇಷ್ಠತಾ ಪಟ್ಟಿಯ ಮೇರೆಗೆ ಭರ್ತಿ ಮಾಡದೇ ಜೇಷ್ಠತೆಯಲ್ಲಿ ಹಾಗೂ ಬೋಧನೆಯಲ್ಲಿ ಹಿರಿಯರಾದ ಅನೇಕ ಪ್ರಾಧ್ಯಾಪಕರುಗಳನ್ನು ಕಡೆಗಣಿಸಿ ಬೋಧನಾ ಅನುಭವ ಇಲ್ಲದ ಹಾಗೂ ಜೇಷ್ಠತೆಯಲ್ಲಿ ಅತ್ಯಂತ ಕಿರಿಯರಾದ ಹಲವಾರು ಪ್ರಾಧ್ಯಾಪಕರುಗಳಿಗೆ ಕಾನೂನು ಬಾಹಿರವಾಗಿ ನೀಡಿರುವ ಬಗ್ಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ;

ಈ) ಇದರಿಂದ ಹಿರಿಯ ಹಾಗೂ ಅನುಭವಿ ಪ್ರಾಧ್ಯಾಪಕರುಗಳಿಗೆ ಮಾನಸಿಕ ಆಘಾತವಾಗಿರುತ್ತದೆ; ಆದುದರಿಂದ, ಈ ತಾರತಮ್ಯವನ್ನು ಸರಿಪಡಿಸಲಾಗುವುದೇ?

ಶ್ರೀ ರಾಮಚಂದ್ರಗೌಡ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಷರಾ ಇಲ್ಲ.

ಆ) ಇಲ್ಲ.

ಇ) ಬೋಧನಾ ಆಸ್ಪತ್ರೆಯಲ್ಲಿನ ಅತ್ಯಂತ ಹಿರಿಯ ಪ್ರಾಧ್ಯಾಪಕರನ್ನು ಆಯಾ ವಿಭಾಗದ ಪ್ರಾಧ್ಯಾಪಕರು ಮತ್ತು ಇಲಾಖಾ ಮುಖ್ಯಸ್ಥರ ಕರ್ತವ್ಯಗಳ ಜೊತೆಗೆ ಹೆಚ್ಚುವರಿಯಾಗಿ ವೈದ್ಯಕೀಯ ಅಧೀಕ್ಷಕರನ್ನಾಗಿ ಪದನಾಮೀಕರಿಸಲಾಗಿದೆ.

ಈ) ಭಾರತೀಯ ವೈದ್ಯಕೀಯ ಪರಿಷತ್ತಿನ ಮಾರ್ಗಸೂಚಿಗಳನ್ನು ಅನುಸರಿಸುವಂತೆ ಎಲ್ಲಾ ಸ್ವಾಯತ್ತ ಸಂಸ್ಥೆಗಳಿಗೆ ಸೂಚಿಸಲಾಗಿದೆ.

ಡೀನ್/ ಪ್ರಾಂಶುಪಾಲರು ವಿಭಾಗ ಮುಖ್ಯಸ್ಥರ ನೇಮಕಾತಿ

389 (85) ಡಾ: ಹೆಚ್.ಸಿ. ಮಹದೇವಪ್ಪ (ಟಿ. ನರಸೀಪುರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೈದ್ಯಕೀಯ ಕಾಲೇಜುಗಳ ಡೀನ್/ಪ್ರಾಂಶುಪಾಲರು, ವೈದ್ಯಕೀಯ ಅಧೀಕ್ಷಕರು, ವಿಭಾಗಗಳ ಮುಖ್ಯಸ್ಥರುಗಳ ನೇಮಕಾತಿ ಸಂಬಂಧ ಭಾರತೀಯ ವೈದ್ಯಕೀಯ ಪರಿಷತ್ತು, 1998ರ ನಿಯಮಾವಳಿಗೆ 2009ನೇ ಸಾಲಿನಲ್ಲಿ ತಿದ್ದುಪಡಿ ತಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜು ಹಾಗೂ ಬೋಧಕ ಆಸ್ಪತ್ರೆಗಳಲ್ಲಿನ ಡೀನ್/ಪ್ರಾಂಶುಪಾಲರು, ವೈದ್ಯಕೀಯ ಅಧೀಕ್ಷಕರು ಹಾಗೂ ವಿಭಾಗಗಳ ಮುಖ್ಯಸ್ಥರ ಹುದ್ದೆಗಳನ್ನು ಮೇಲ್ಕಂಡ ಅಧಿನಿಯಮದ ನಿಯಮಗಳಿಗೆ ಅನುಸಾರ ನೇಮಕ ಮಾಡಲಾಗಿದೆಯೇ;

ಇ) ಇಲ್ಲದೇ, ಇದ್ದಲ್ಲಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ರಾಮಚಂದ್ರ ಗೌಡ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ಎಂಸಿಐ ನಿಯಂತ್ರಣಗಳನ್ನು ಅಳವಡಿಸಿಕೊಳ್ಳುವಂತೆ ಎಲ್ಲಾ ಸ್ವಾಯತ್ತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳಿಗೆ ಸಲಹೆ ನೀಡಲಾಗುತ್ತಿದೆ.